# QCA : 31/II

## ಸಾಮಾನ್ಯ ಅಧ್ಯಯನ : Paper-II

## GENERAL STUDIES : Paper-II

## 2014

| | |
|---|---|
| ಸಮಯ : 3 ಗಂಟೆಗಳು | ಗರಿಷ್ಠ ಅಂಕಗಳು : 250 |
| Time : 3 hours | Maximum marks : 250 |

### ಸೂಚನೆಗಳು

### INSTRUCTIONS

1. ಉತ್ತರಿಸುವುದಕ್ಕೆ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಯನ್ನು ಗಮನವಿಟ್ಟು ಓದಿಕೊಳ್ಳಿ.
2. ಇಲ್ಲಿ **20** ಪ್ರಶ್ನೆಗಳಿವೆ. ಅವುಗಳಿಗೆ ಕನ್ನಡ ಮತ್ತು ಇಂಗ್ಲಿಷ್ ಎರಡು ಭಾಷೆಗಳಲ್ಲಿ ಮುದ್ರಿಸಲಾಗಿದೆ.
3. ಎಲ್ಲ ಪ್ರಶ್ನೆಗಳೂ ಕಡ್ಡಾಯ.
4. ಪ್ರಶ್ನೆ/ಭಾಗಕ್ಕೆ ನಿಗದಿಸಿದ ಅಂಕಗಳನ್ನು ಅದರ ಮುಂದೆಯೇ ತಿಳಿಸಲಾಗಿದೆ.
5. ಪ್ರವೇಶ ಪ್ರಮಾಣ ಪತ್ರದಲ್ಲಿ ಅಧಿಕೃತವಾಗಿ ತಿಳಿಸಿದ ಭಾಷಾ ಮಾಧ್ಯಮದಲ್ಲಿಯೇ ಉತ್ತರಿಸಬೇಕು.
6. ಈ ಪ್ರಶ್ನೆ ಹಾಗೂ ಉತ್ತರ ಪುಸ್ತಿಕೆಯ ರಕ್ಷಾಪುಟದಲ್ಲಿ ಒದಗಿಸಿರುವ ಸ್ಥಳದಲ್ಲಿ ನೀವು ಯಾವ ಭಾಷೆಯಲ್ಲಿ ಉತ್ತರಿಸುತ್ತಿದ್ದೀರಿ ಎಂಬುದನ್ನು ನಮೂದಿಸಬೇಕು.
7. ಅಧಿಕೃತವಾಗಿ ತಿಳಿಸಿದ ಭಾಷೆಯನ್ನು ಬಿಟ್ಟು ಬೇರೆ ಮಾಧ್ಯಮದಲ್ಲಿ ಬರೆದ ಉತ್ತರಗಳಿಗೆ ಅಂಕಗಳನ್ನು ನೀಡಲಾಗುವುದಿಲ್ಲ.
8. ಉತ್ತರವು ಇಂತಿಷ್ಟೇ ಪದಗಳಲ್ಲಿರಬೇಕು ಎಂದು ಪ್ರಶ್ನೆಪತ್ರಿಕೆಯಲ್ಲಿ ತಿಳಿಸಿದ್ದರೆ, ಅದ್ದನ್ನು ಪಾಲಿಸತಕ್ಕದ್ದು.
9. ಉತ್ತರ ಪ್ರಸ್ತಿಕೆಯಲ್ಲಿ ಯಾವುದಾದರೂ ಪುಟವನ್ನು ಅಥವಾ ಪುಟದ ಭಾಗವನ್ನು ಖಾಲಿಬಿಟ್ಟಿದ್ದರೆ ಅದನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

**(Please read each of the following instructions carefully before attempting questions)**

There are **TWENTY** questions printed both in **KANNADA** and in **ENGLISH**.

All the questions are compulsory.

The number of marks carried by a question/part is indicated against it.

Answer must be written in the medium authorized in the Admission Certificate which must be stated clearly on the cover of this Question-cum-Answer (QCA) Booklet in the space provided. No marks will be given for answers written in a medium other than the authorized one.

Word limit in questions, wherever specified, should be adhered to.

Any page or portion of the page left blank in the Question-cum-Answer Booklet must be clearly struck off.

ಪ್ರತಿ ಪ್ರಶ್ನೆಗೂ 150 ಪದಗಳಿಗೆ ಮೀರದಂತೆ ಉತ್ತರಿಸಿ ಉತ್ತರ ಎಷ್ಟು ದೀರ್ಘವಾಗಿದೆ ಎಂಬುದಕ್ಕಿಂತ ಏನು ಉತ್ತರ ಬರೆದ್ದೀರಿ ಎಂಬುದು ಮುಖ್ಯ. ಎಲ್ಲ ಪ್ರಶ್ನೆಗಳಿಗೂ ಸಮಾನ ಅಂಕಗಳು :

**Answer all the questions not more than 150 words each. Contents of the answer are more important than its length. All questions carry equal marks :**

1. ರಾಜ್ಯಪಾಲರ ವಿವೇಚನಾಧಿಕಾರವನ್ನು ಟೀಕಾತ್ಮಕವಾಗಿ ವಿಮರ್ಶಿಸಿ. **12 ½**

   Critically analyse the Discretionary powers of Governor.

2. ಭಾರತದ ಸಂವಿಧಾನವು ಕೇಂದ್ರ ಸರ್ಕಾರವನ್ನು ಪ್ರಬಲಗೊಳಿಸಿ ರಾಜ್ಯಗಳನ್ನು ದುರ್ಬಲಗೊಳಿಸಿದೆ. ಚರ್ಚಿಸಿ. **12 ½**

   The constitution of India provides strong Central Government and weak States. Discuss.

3. ನಗರೀಕರಣದ ಪ್ರಕ್ರಿಯೆ ಬಗ್ಗೆ ವಿವರಿಸಿರಿ ಹಾಗೂ ಭಾರತದ ನಗರೀಕರಣ ಕುರಿತು ತಿಳಿಸಿರಿ. **12 ½**

   Explain the process of Urbanization with special reference to India.

4. ನಗರದ ಅಂಚಿನ ವೈಶಿಷ್ಟ್ಯತೆಗಳನ್ನು ಕುರಿತು ಬರೆಯಿರಿ. **12 ½**

   Write the salient features of urban fringe.

5. ಸಾಗರಗಳ ಲವಣತೆಯ ಹಂಚಿಕೆಯನ್ನು ನಿಯಂತ್ರಿಸುವ ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ. **12 ½**

   Summarize the factors influencing on the distribution of Ocean Salinity.

6. ಮಾನವ ಜನಾಂಗದ ವರ್ಗೀಕರಣದ ಆಧಾರಗಳನ್ನು ವಿವರಿಸಿರಿ. **12 ½**

   Narrate the bases for Human racial classification.

7. ಜನಸಂಖ್ಯಾ ಹಂಚಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳನ್ನು ವಿವರಿಸಿರಿ. 12 ½

Elucidate the factors influencing the distribution of population.

8. ಚುನಾವಣಾ ಆಯೋಗದ ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸಿ. 12 ½

Explain the powers and functions of Election commission.

9. ರಾಜ್ಯ ನಿರ್ದೇಶಕ ತತ್ವಗಳಲ್ಲಿನ ಸಮಾಜವಾದಿ ತತ್ವಗಳನ್ನು ವಿವರಿಸಿ. 12 ½

Explain the socialistic principles of directive principles of state policy.

10. "ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಒಂದು ಶ್ರೇಷ್ಠ ಸಂಪುಟ" (ಸೂಪರ್ ಕ್ಯಾಬಿನೆಟ್) ಪರಿಶೀಲಿಸಿ. 12 ½

"National development council is a super cabinet." Examine.

11. ಕಲ್ಯಾಣ ರಾಷ್ಟ್ರಗಳ ಆಡಳಿತಾತ್ಮಕ ವ್ಯವಹಾರಗಳಲ್ಲಿ ಮಂತ್ರಿಗಳು ಮತ್ತು ನಾಗರಿಕ ಸೇವೆಗಳ ನಡುವಿನ ಸಂಬಂಧವನ್ನು ವಿವರಿಸಿರಿ. 12 ½

Bring out the relationship between Ministers and Civil Services in administering the affairs of welfare states.

12. ವಿವಿಧ ರೀತಿಯ ಸಂವಹನ ವಿಧಾನಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ. 12 ½

Briefly explain the different types of Communication.

13. ನಿರ್ಣಯ ಕೈಗೊಳ್ಳುವಿಕೆಯಲ್ಲಿ ಯೋಜನಾ ಪ್ರಕ್ರಿಯೆಯ ಮಹತ್ವವನ್ನು ವಿವರಿಸಿ. ಯೋಜನೆಯ ಘಟಕಾಂಶಗಳ ಮೌಲ್ಯಮಾಪನ ಮಾಡಿ. 12 ½

Explain the significance of planning process in decision making and evaluate the components of plan.

14. ಅಧಿಕಾರ ವಿನಿಯೋಗಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ವಿಮರ್ಶಾತ್ಮಕವಾಗಿ ನಿಷ್ಕರ್ಷೆ ಮಾಡಿ. ಪರಿಣಾಮಕಾರಿಯಾದ ವಿನಿಯೋಗಕ್ಕೆ ಕೆಲವು ಮಾರ್ಗದರ್ಶನಗಳನ್ನು ನೀಡಿ. 12 ½

Critically evaluate the problems associated with delegation of authority. Suggest guidelines for effective delegation.

15. "ನಾಯಕತ್ವವು ಸಾಂದರ್ಭಿಕ ಆಗಿದೆ" ಈ ಹೇಳಿಕೆಯ ಬೆಳಕಿನಲ್ಲಿ ನಾಯಕತ್ವದ ವಿವಿಧ ಸಿದ್ಧಾಂತಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ. 12 ½

"Leadership is Situational". In the light of this statement discuss the various theories of leadership in brief.

16. ಸಾರ್ವಜನಿಕ ಆಡಳಿತ ಕ್ಷೇತ್ರದಲ್ಲಿ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದಲ್ಲಿ ಇರುವ ಮೃದು ಸುಧಾರಣಾ ವಿಧಾನಗಳನ್ನು ವಿಶ್ಲೇಷಿಸಿ. 12 ½

Give an analysis of soft reformative techniques of monitoring and evaluation in the field of public Administration.

17. ಭಾರತ ಸರ್ಕಾರವು ಕಾಲಾನುಕಾಲಕ್ಕೆ ಜಾರಿಗೆ ತಂದಿರುವ ಕಲ್ಯಾಣ ಕಾರ್ಯಕ್ರಮಗಳಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರ ಸ್ಥಿತಿಗತಿಗಳನ್ನು ವಾಸ್ತವಿಕವಾಗಿ ಸುಧಾರಿಸಿವೆಯೇ? 12 ½

Have the welfare measures implemented by the Government of India from time to time reformed the condition of SC/ST and women practically?

18. "ದ್ವಿಸದನ ಶಾಸಕಾಂಗವು ಶಾಸಕಾಂಗದ ನಿರಂಕುಶತೆಯಿಂದ ವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸುತ್ತದೆ" ಚರ್ಚಿಸಿ. 12 ½

'Bi cameral legislation protects individual freedom against legislative despotism'. Discuss.

19. "ಔಪಚಾರಿಕ ಮತ್ತು ಅನೌಪಚಾರಿಕ ಸಂಸ್ಥೆಗಳ" ನಡುವಿನ ವ್ಯತ್ಯಾಸವನ್ನು ತಿಳಿಸಿ. ಅನೌಪಚಾರಿಕ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಇರುವ ಅನುಕೂಲಗಳು ಹಾಗೂ ಸಮಸ್ಯೆಗಳು ಯಾವುವು? 12 ½

Distinguish between 'Formal and Informal Organisation'. What are the benefits and problems associated with Informal Organisation?

20. ಕರ್ನಾಟಕದಲ್ಲಿ ಕೈಗಾರಿಕಾ ಉತ್ಪಾದನೆಯ ಇತ್ತೀಚಿನ ಪ್ರವೃತ್ತಿಗಳ ಬಗ್ಗೆ ವಿವರವಾಗಿ ಬರೆಯಿರಿ. 12 ½

Explain the recent trends in industrial production in Karnataka.